ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1259(1748)
ಸದಸ್ಯರ ಹೆಸರು	ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)
ಉತ್ತರಿಸಬೇಕಾದ ಸಚಿವರು	ಶ್ರೀ ಜೆ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಅಪೆಕ್ಸ್ ಬ್ಯಾಂಕಿನಲ್ಲಿ ನೇಮಕಾತಿಗೆ ಸಂಬಂಧಪಟ್ಟಂತೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದುದು ನಿಜವೇ?

ಶ್ರೀ ಎನ್ ರಾಜಗೋಪಾಲ್ ಎಂಬುವವರು ತಮ್ಮ ನೇಮಕಾತಿಗೆ ಸಂಬಂಧಪಟ್ಟಂತೆ ನ್ಯಾಯಾಂಗ ನಿಂದನೆ ಅರ್ಜಿ ಸಂಖ್ಯೆ ಸಿಸಿಸಿ 573/2006 (ಸಿವಿಲ್) ಅನ್ನು ಸಲ್ಲಿಸಿದ್ದರು

ಆ) ಸರ್ಕಾರದಲ್ಲಿ ಯಾರ ಮೇಲೆ ಮತ್ತು ಯಾವ ಕಾರಣಗಳಿಗಾಗಿ ಈ ನ್ಯಾಯಾಂಗ ನಿಂದನೆ ಅರ್ಜಿಯನ್ನು ಸಲ್ಲಿಸಲಾಗಿತ್ತು?

ಸರ್ಕಾರದ ಸಹಕಾರ ಇಲಾಖೆಯ

1) ಶ್ರೀ ಸಿ ಎಸ್ ಕೇದಾರ, ಐ ಎ ಎಸ್ ಅಂದಿನ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಹಾಗೂ

ಶ್ರೀ ಆರ್ ಎಸ್ ಹುಚ್ಚಾಚಾರಿ, ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ 2274/2004ರಲ್ಲಿ ದಿನಾಂಕ 25 05 2005ರಲ್ಲಿ ಹೊರಡಿಸಿರುವ ಆದೇಶವನ್ನು ಪಾಲಿಸಿರುವುದಿಲ್ಲ ಎಂಬ ಕಾರಣದ ಮೇಲೆ ನ್ಯಾಯಾಂಗ ನಿಂದನೆ ಅರ್ಜಿಯನ್ನು ಶ್ರೀ ಎಸ್ ರಾಜಗೋಪಾಲ್ ಎಂಬುವವರು ಸಲ್ಲಿಸಿರುತ್ತಾರೆ

ಇ) ಈ ಸಂಬಂಧವಾಗಿ ಸರ್ಕಾರವು ನ್ಯಾಯಾಲಯದ ಕ್ಷಮಾಪಣೆಯನ್ನು ಕೋರಿ ಪ್ರಮಾಣಪತ್ರವನ್ನು ಸಲ್ಲಿಸಿರುವುದು ನಿಜವೇ? ಹಾಗಿದ್ದಲ್ಲಿ ಪ್ರಮಾಣಪತ್ರದ ವಿವರಗಳ ಮತ್ತು ಸರ್ಕಾರದ ಆದೇಶದ ಪ್ರತಿಗಳನ್ನು ಒದಗಿಸುವುದು

ನ್ಯಾಯಾಂಗ ನಿಂದನೆ ಅರ್ಜಿಯ [ಸಿಸಿಸಿ ನಂ 573/2006 (ಸಿವಿಲ್)] ಪೂರ್ವಭಾವಿ ವಿಚಾರಣೆ ನಡೆಸಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ 2274/2004ರಲ್ಲಿ ದಿನಾಂಕ 25 05 2005ರಲ್ಲಿ ನೀಡಿರುವ ತೀರ್ಪಿನ ಉಲ್ಲಂಘನೆಯಾಗಿ ಇದು ನ್ಯಾಯಾಲಯ ನಿಂದನೆ ಆಗುತ್ತದೆ ಎಂದು ಅಭಿಪ್ರಾಯಕ್ಕೆ

ಬಂದು ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಆದೇಶವನ್ನು ಪಾಲಿಸುವ ಅಗತ್ಯತೆಯನ್ನು ಮನಗಂಡು ಸರ್ಕಾರವು ಪತ್ರಸಂಖ್ಯೆ ಸಿಎಂಡಬ್ಲ್ಯೂ 65 ಸಿಎಲ್ಎಸ್ 2002 ದಿನಾಂಕ 30 05 2006ನ್ನು ದಿನಾಂಕ 21 02 2007ರಂದು ಹಿಂಪಡೆದು ನ್ಯಾಯಾಲಯಕ್ಕೆ ಪ್ರಮಾಣಪತ್ರವನ್ನು ಸಲ್ಲಿಸಲಾಗಿದೆ ಸರ್ಕಾರದ ದಿನಾಂಕ 21 02 2007ರ ಪತ್ರದ ಪ್ರತಿಯನ್ನು ಲಗತ್ತಿಸಿದೆ

ಈ) ಈ ಪ್ರಮಾಣಪತ್ರವನ್ನು ಸಲ್ಲಿಸಿದ ನಂತರ ನ್ಯಾಯಾಲಯದ ಆದೇಶವನ್ನು ಸಹಕಾರ ಸಂಘಗಳ ನಿಬಂಧಕರು ಪಾಲಿಸಿ ಮಾಡಿದ್ದಾರೆಯೇ? (ಎವರ ನೀಡುವುದು)

ಹೌದು ಸಹಕಾರ ಸಂಘಗಳ ನಿಬಂಧಕರು ತಮ್ಮ ಪತ್ರಸಂಖ್ಯೆ ಸಿಆರ್ಡಿ/47/ಕೆಆರ್ಎಫ್ –1/2001–02 ದಿನಾಂಕ 01 03 2007ರ ಪ್ರಕಾರ ಸರ್ಕಾರದ ದಿನಾಂಕ 21 02 2007ರ ಪತ್ರದ ಪ್ರತಿಯನ್ನು ಅಪೆಕ್ಸ್ ಬ್ಯಾಂಕಿಗೆ ಕಳುಹಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ

ಉ) ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ?

ಊ) ಇಲ್ಲದಿದ್ದಲ್ಲಿ ಕಾರಣಗಳೇನು?

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ ಗೌರವಾನ್ವಿತ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ 2274/2004ರಲ್ಲಿ ದಿನಾಂಕ 25 05 2005ರಲ್ಲಿ ನೀಡಿರುವ ತೀರ್ಪಿನ ಉಲ್ಲಂಘನೆಯಾಗಿ ಇದು ನ್ಯಾಯಾಲಯದ ನಿಂದನೆ ಆಗುತ್ತದೆ ಎಂದು ನ್ಯಾಯಾಂಗ ನಿಂದನೆ ಅರ್ಜಿ ಸಿಸಿಸಿ ಸಂಖ್ಯೆ 573 (ಸಿವಿಲ್)ರ ಪೂರ್ವಭಾವಿ ವಿಚಾರಣೆ ನಡೆಸಿದ ನ್ಯಾಯಾಲಯವು ಅಭಿಪ್ರಾಯಕ್ಕೆ ಬಂದು, ನ್ಯಾಯಾಲಯವು ನೀಡಿರುವ ತೀರ್ಪನ್ನು ಪಾಲಿಸುವ ಅಗತ್ಯತೆ ಇದ್ದ ಕಾರಣ, ಸರ್ಕಾರದ ಪತ್ರ ಸಿಎಂಡಬ್ಲ್ಯೂ/65/ಸಿಎಲ್ಎಸ್/2002 ದಿನಾಂಕ 21 02 2006ನ್ನು ಹಿಂದಕ್ಕೆ ಪಡೆದು ದಿನಾಂಕ 21 02 2007ರಲ್ಲಿ ನಿಬಂಧಕರಿಗೆ ಪತ್ರ ಬರೆಯಲಾಗಿದೆ

ಸುವರ್ಣ ಕರ್ನಾಟಕ – 2006

ಕರ್ನಾಟಕ ಸರ್ಕಾರ

ಸಂಖ್ಯೆ ಸಿಎಂಡಬ್ಲ್ಯೂ 65 ಸಿಎಲ್‌ಎಸ್ 2002 ಕರ್ನಾಟಕ ಸರ್ಕಾರದ
ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ 21 02 2007

ಇಂದ
ಸರ್ಕಾರದ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು

ಇವರಿಗೆ
ಸಹಕಾರ ಸಂಘಗಳ ನಿಬಂಧಕರು,
ನಂ 1, ಆಲಿ ಆಸ್ಕರ್ ರಸ್ತೆ,
ಬೆಂಗಳೂರು–560052

ಮಾನ್ಯರೇ

ವಿಷಯ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಲ್ಲಿ ಪಟ್ಟಿ ಬರಹಗಾರರ ಹುದ್ದೆಗೆ ಶ್ರೀ ಎನ್ ರಾಜಗೋಪಾಲ್ ಅವರನ್ನು ನೇಮಿಸುವ ಬಗ್ಗೆ

ಉಲ್ಲೇಖ 1 ಸರ್ಕಾರದ ಸಮ ಸಂಖ್ಯೆಯ ಪತ್ರ ದಿನಾಂಕ 9 7 2002
2 ಸರ್ಕಾರದ ಸಮಸಂಖ್ಯೆಯ ಪತ್ರ ದಿನಾಂಕ 2 6 2003
3 ಸರ್ಕಾರದ ಸಮ ಸಂಖ್ಯೆಯ ಪತ್ರ ದಿನಾಂಕ 3 2 2005 & 19 03 2005
4 ಗೌರವ ಉಚ್ಚ ನ್ಯಾಯಾಲಯದ ರಿಟ್ ಅಪೀಲ್ ಸಂಖ್ಯೆ 2274/04 ರಲ್ಲಿ ನೀಡಿರುವ ತೀರ್ಪು
5 ಸರ್ಕಾರದ ಸಮ ಸಂಖ್ಯೆಯ ಪತ್ರ ದಿನಾಂಕ 30 05 2006
6 ಗೌರವ ಉಚ್ಚ ನ್ಯಾಯಾಲಯದ ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ 573/2006(ಸಿವಿಲ್)ರಲ್ಲಿ ದಿನಾಂಕ 8 2 2007 ರಂದು ನೀಡಿರುವ ಆದೇಶ

***

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಶ್ರೀ ಎನ್ ರಾಜಗೋಪಾಲ್

ಇವರನ್ನು ಪಟ್ಟಿ ಬರಹಗಾರರ ಹುದ್ದೆಗೆ ನೇಮಿಸಿಕೊಳ್ಳಲು ನಿರ್ಧರಿಸಿ ಅವರ ವಯೋಮಿತಿಯ ಸಡಿಲಿಕೆಗೆ ಅನುಮತಿ ಕೇಳಿದ್ದರಿಂದ ರಾಜ್ಯ ಸರ್ಕಾರವು ಸಹಕಾರ ಸಂಘಗಳ ನಿಬಂಧಕರಿಗೆ ವಿಳಾಸಿಸಿರುವ ಉಲ್ಲೇಖ (1)ರ ಪತ್ರದಲ್ಲಿ ಸದರಿಯವರ ವಯೋಮಿತಿಯ ಸಡಿಲಿಕೆಗೆ ಅನುಮತಿ ನೀಡಿತ್ತು

ಸಹಕಾರ ಸಂಘಗಳ ನಿಬಂಧಕರು ಮೇಲ್ಕಂಡ ಅನುಮತಿಯನ್ನು ಪುನರ್‌ವಿಮರ್ಶಿಸಲು ಸಲ್ಲಿಸಿದ ಪ್ರಸ್ತಾವೆಯನ್ನು ಪರಿಗಣಿಸಿ ಉಲ್ಲೇಖ(2)ರ ಪತ್ರದಲ್ಲಿ ವಯೋಮಿತಿ ಸಡಿಲಿಕೆಯನ್ನು ಹಿಂಪಡೆಯಲಾಗಿತ್ತು ಆದರೆ ಈ ಮಧ್ಯೆ ಮಾನ್ಯ ಮುಖ್ಯಮಂತ್ರಿಗಳು ಟಿಪ್ಪಣಿ ಕಳುಹಿಸಿ ವಯೋಮಿತಿಯ ಸಡಿಲಿಕೆಯನ್ನು revive ಮಾಡಲು ಆದೇಶಿಸಿದ ಪ್ರಕಾರ ಉಲ್ಲೇಖ(3)ರ ಪತ್ರವನ್ನು ಹೊರಡಿಸಲಾಗಿತ್ತು ಮಾನ್ಯ ಮುಖ್ಯಮಂತ್ರಿಗಳ ಆದೇಶವನ್ನು ಮನ್ನಿಸಿದರೂ ಸಹ ಸದರಿ ಅನುಮತಿಯ ಕಾನೂನುಬಾಹಿರವಾದ್ದರಿಂದ ಕಾನೂನು ಚೌಕಟ್ಟಿನಲ್ಲಿ ಕೂಲಂಕುಶವಾಗಿ ಪರಿಗಣಿಸಿ ಪುನಃ ಮಾನ್ಯ ಮುಖ್ಯಮಂತ್ರಿಯವರ ಆದೇಶಕ್ಕಾಗಿ ಮಂಡಿಸಿ ಅವರಿಗೆ ಮನವರಿಕೆ ಮಾಡಿ ಅವರ ಒಪ್ಪಿಗೆ ಪಡೆದು ಉಲ್ಲೇಖ(5)ರ ಪ್ರಶ್ನಿತ ಪತ್ರವನ್ನು ಹೊರಡಿಸಲಾಗಿತ್ತು

ಈ ಮಧ್ಯೆ ಶ್ರೀ ಎನ್ ರಾಜಗೋಪಾಲ್ ಇವರು ನ್ಯಾಯಾಲಯ ನಿಂದನಾ ಅರ್ಜಿ ಹೂಡಿರುತ್ತಾರೆ ಸದರಿ ಅರ್ಜಿಯ ಪೂರ್ವಭಾವಿ ವಿಚಾರಣೆ ನಡೆಸಿ ಮಾನ್ಯ ಉಚ್ಚನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ 2274/2004ರಲ್ಲಿ ನೀಡಿರುವ ತೀರ್ಪಿನ ಉಲ್ಲಂಘನೆಯಾಗಿ ಇದು ನ್ಯಾಯಾಲಯ ನಿಂದನೆ ಆಗುತ್ತದೆ ಎಂದು ಅಭಿಪ್ರಾಯಕ್ಕೆ ಬಂದು ದೂಷಿತ ಅಧಿಕಾರಿಗಳ ಮೇಲೆ ಆರೋಪಗಳನ್ನು ನಿರ್ಧರಿಸಲು ದಿನಾಂಕ 26 02 2007ರಂದು ಪ್ರಕರಣವನ್ನು ನಿಗದಿಪಡಿಸಿದೆ

ಈ ಹಿನ್ನೆಲೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ 2274/2004ರಲ್ಲಿ ನೀಡಿರುವ ತೀರ್ಪನ್ನು ಪಾಲಿಸುವ ಅಗತ್ಯತೆಯನ್ನು ಮನಗಂಡು ಸರ್ಕಾರದ ಪತ್ರ ಸಂಖ್ಯೆ ಸಿಎಂಡಬ್ಲ್ಯೂ 65 ಸಿಎಲ್‌ಎಸ್ 2002 ದಿನಾಂಕ 30 05 2006 ಅನ್ನು ಕೂಡಲೇ ಹಿಂಪಡೆಯಲಾಗಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ